**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ಸಂಖ್ಯೆ: 1005/2018**

ಫಿರ್ಯಾದಿ :

ಎ.ಸುಬ್ರಹ್ಮಣ್ಯ
ಬಿನ್ ಲೇ.ಅಂದಾನೇಗೌಡ,
ನಂ.ಸಿ-26, ಬಣ್ಣಾರಿಅಮ್ಮನ ಶುಗರ್ಸ್‌ಫ್ಯಾಕ್ಟ್ರಿ ಲಿ ಕ್ವಾಟ್ರಸ್,
ಮಲ್ಲಿಪುರ ಅಂಚೆ, ಬಿಳಿಗೆರೆ ಹೋಬಳಿ,
ನಂಜನಗೂಡು ತಾಲ್ಲೂಕು.

ವಿರುದ್ಧ

ಆರೋಪಿ :

ಎಸ್.ಮಾಲಯ್ಯ,
ಬಿನ್ ಲೇ.ಸಿದ್ದಯ್ಯ,
ನಂ.68, ಎನ್ ಜಿ ಓ ಕಾಲೋನಿ,
ನಂಜನಗೂಡು ಟೌನ್,
ಹಾಲಿ ವಾಸ ಮಾಲಯ್ಯ ಚ/ಒ ದಲ್ಲಾಳಿ ಕಪಿನಶೆಟ್ಟಿ
ಮದುವಿನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಮಲೈ ಮಹಾದೇಶ್ವರ ಬೆಟ್ಟದ ರಸ್ತೆ,
ಕೊಳ್ಳೆಗಾಲ ತಾಲ್ಲೂಕು.
ಚಾಮರಾಜನಗರ ಜಿಲ್ಲೆ.

: ಆರೋಪಣೆ :

ವಿನುತಾ.ಡಿ.ಎಸ್ ಬಿ.ಎಸ್‌ಸಿ (ಸೆರಿ), ಎಲ್‌ಎಲ್‌ಬಿ **2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:**

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಸ್ಪರ ಸ್ನೇಹಿತರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಕುಟುಂಬದ ಖರ್ಚಿಗೂ ಹಾಗೂ ಕೈ ಸಾಲ ತೀರಿಸುವ ಸಲುವಾಗಿ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರನ್ನು 2017 ನೇ ಇಸವಿ ಮೇ ತಿಂಗಳಲ್ಲಿ ಭೇಟಿ ಮಾಡಿ ರೂ.3,00,000/- ಗಳನ್ನು ಸಾಲವಾಗಿ ಪಡೆದುಕೊಂಡು 6 ತಿಂಗಳೊಳಗೆ ವಾಪಸ್ ಕೊಡುವುದಾಗಿ ಒಪ್ಪಿ ಸದರಿ ಮೊಬಲಗನ್ನು ಮರುಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಕಾವೇರಿ

ಗ್ರಾಮೀಣ ಬ್ಯಾಂಕ್, ನಂಜನಗೂಡು ತಾಲ್ಲೂಕು, ಅಳಗಂಚಿ ಗ್ರಾಮ ಶಾಖೆಯ ಚೆಕ್ ನಂ 359223 ಕ್ಕೆ ರೂ.*3,00,000/-* ಗಳನ್ನು ದಿನಾಂಕಃ 04.12.2017 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಬರಹದೊಂಗೆ ದಿಃ 06.12.2017 ರಂದು ನಗಧೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.*19.12.2017* ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ವಿಚಾರ ನಿಮಗೆ ತಿಳಿದಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ *138* ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 ಃ ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?

ಉತ್ತರ ಃ ಹೌದು

ಪ್ರಶ್ನೆ-2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

ಉತ್ತರ ಃ ವಿಚಾರಣೆ ಆಗಬೇಕು

**(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 16-12-2020 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).**

ಸಹಿ/-

2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ನಂಜನಗೂಡು